ಮೈಸೂರಿನ ಜೆ. ಎಸ್. ಎಸ್. ಮೆಡಿಕಲ್ ಕಾಲೇಜಿನಲ್ಲಿ ಪ್ರವೇಶಪಟ್ಟಿ ವಿದ್ಯಾರ್ಥಿಗಳ ಸಂಖ್ಯೆ ಬಗ್ಗೆ

೨೦೩೧. ಶ್ರೀ ಬಿ. ಡಿ. ಬಸವರಾಜು (ಸಕಲೇಶಪುರ).— ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಮೈಸೂರಿನ ಜೆ. ಎಸ್. ಎಸ್. ಮೆಡಿಕಲ್ ಕಾಲೇಜಿನಲ್ಲಿ ೧೯೮೫-೮೬ ರಲ್ಲಿ ಸರ್ಕಾರದ ದೇಯಾಂಶ (ಕೋಟಾ) ದಲ್ಲಿ ಪ್ರವೇಶಪಡೆದ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಆ) ಈ ಬಗ್ಗೆ ಸರ್ಕಾರವು ಪ್ರಕಟಣೆ ಹೊರಡಿಸಿದ ದಿನಾಂಕವನ್ನು ಮತ್ತು ಈ ವಿದ್ಯಾರ್ಥಿಗಳ ಪ್ರಥಮ ಎಂ. ಬಿ. ಬಿ. ಎಸ್. ತರಗತಿಗೆ ಜೆ. ಎಸ್. ಎಸ್. ಮೆಡಿಕಲ್ ಕಾಲೇಜಿನಲ್ಲಿ ಸೇರಿದ ದಿನಾಂಕ ತಿಳಿಸಿ.

ಇ) ೧೯೮೫-೮೬ ರಲ್ಲಿ ಮೈಸೂರಿನ ಜೆ. ಎಸ್. ಎಸ್. ಮೆಡಿಕಲ್ ಕಾಲೇಜಿನಲ್ಲಿ ಪ್ರಥಮ ಎಂಬಿಬಿಎಸ್ ತರಗತಿಗಳಿಗೆ ಪ್ರವೇಶ ಪಡೆದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳ ಹೆಸರು ಮತ್ತು ವಿಳಾಸ ತಿಳಿಸಿ.

ಈ) ಮೈಸೂರಿನ ಜೆ. ಎಸ್. ಎಸ್. ಮೆಡಿಕಲ್ ಕಾಲೇಜಿನಲ್ಲಿ ೧೯೮೫-೮೬ ರಲ್ಲಿ ಪ್ರವೇಶ ಪಡೆದಿರುವ ಕೆಲವು ವಿದ್ಯಾರ್ಥಿಗಳಿಗೆ ಪ್ರಥಮ ಎಂ.ಬಿ. ಬಿ.ಎಸ್. ಪರೀಕ್ಷೆಗೆ ಹಾಜರಾಗಲು ಪರವಾನಗಿಯನ್ನು ನಿರಾಕರಿಸುವುದು ಸತ್ಯವೆ ?

ಶ್ರೀ ಡಿ. ಬಿ. ಇನಾಂದಾರ್ (ಆರೋಗ್ಯ ಮಂತ್ರಿಗಳು).—

ಅ) ಇಬ್ಬರು.

ಆ) ಮೇಲ್ಕಂಡ ಇಬ್ಬರು ವಿದ್ಯಾರ್ಥಿಗಳ ಪೈಕಿ ಒಬ್ಬರ ಆಯ್ಕೆಯನ್ನು ಸರ್ಕಾರದ ನಿಯಮಿತ ಆಯ್ಕೆ ಸಮಿತಿಯು ದಿನಾಂಕ ೩೦-೯-೧೯೮೫ ರಲ್ಲಿ ಪ್ರಕಟಿಸಿದ್ದು, ಆ ವಿದ್ಯಾರ್ಥಿಯು ದಿನಾಂಕ ೫-೧೦-೧೯೮೫ ರಲ್ಲಿ ಕಾಲೇಜಿಗೆ ಸೇರಿದ್ದಾರೆ. ಇನ್ನೊಬ್ಬ ವಿದ್ಯಾರ್ಥಿಯ ಆಯ್ಕೆಯನ್ನು ೧೬-೧೦-೮೫ ರಲ್ಲಿ ಪ್ರಕಟಿಸಿದ್ದು ಅವರು ದಿನಾಂಕ ೧ ೨೪-೧೦-೧೯೮೬ ರಂದು ಕಾಲೇಜಿಗೆ ಸೇರಿದ್ದಾರೆ.

ಇ) ೧. ಕುಮಾರಿ ಸಂಮಾ ರುದ್ರಪ್ಪ ೧೨೧ ೧೦ನೇ ಮುಖ್ಯ ರಸ್ತೆ, ೬ನೇ ಅಡ್ಡ ರಸ್ತೆ, ರಾಜಮಹಲ್ ವಿಲಾಸ್ ಬಡಾವಣೆ, ಬೆಂಗಳೂರು-೫೬೦ ೦೮೦.

೨. ಶ್ರೀ ಹೆಚ್. ಆರ್. ತಿಮ್ಮಯ್ಯ, ದಿ. ಹೆಚ್. ರಂಗಯ್ಯನವರ ಪುತ್ರ, ಕೇಂದ್ರ ಸಿಟ್ರಸ್ ಪ್ರಯೋಗ ಸಂಸ್ಥೆ, ಗೋಣಿ ಕೊಪ್ಪಲ್ ಅಂಚೆ, ದ. ಕೊಡಗು-೫೭೨೧೨೩.

ಈ) ಇಲ್ಲ.

ಚನ್ನಪಟ್ಟಣದಲ್ಲಿ ಮುನ್ಸೀಫ್ ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯವನ್ನು ಪ್ರಾರಂಭಿಸುವ ಬಗ್ಗೆ

೧೮೪೧. ಶ್ರೀ ಎಂ. ವರದೇಗೌಡ (ಚನ್ನಪಟ್ಟಣ).—ಮಾನ್ಯ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಚನ್ನಪಟ್ಟಣದಲ್ಲಿ ಮುನ್ಸೀಫ್ ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳನ್ನು ತೆರೆಯುವ ಯೋಜನೆ ಸರ್ಕಾರದವರ ಗಮನದಲ್ಲಿದೆಯೇ ?

ಆ) ಹಾಗಿದ್ದರೆ ಯಾವಾಗ ಪ್ರಾರಂಭಿಸಲಾಗುವುದು ?

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ?